# Research maGma

## (An International Multidisciplinary Journal)

**UGC Approved Journal No: 63465**

Editor in Chief
Dr. Sanjay Kumar Singh

Associate Editor
Dr. T. Manichander

# Research maGma

Research maGma is a multidisciplinary research journal, published monthly in all Language. All research papers submitted to the journal will be double - blind peer reviewed .


## Our Editorial Board

Dr Anil Kumar S.
Dr. Gatade Dattatraya Ganapati
Dr. Prashant Thote
Dr. Deepa Viswam
Dr. Anamika Kumari
Smt. B.S.Gunarekha
Dr. P. Samuel
Dr. Pargat Singh Garcha
Dr. M. Abdul Jamal
Dr. Tapas Pal
Dr. Gardi Balu Pandurang
Dr. Dnyaneshwar Babulal Shirode
Dr. Ashokkumar B. Surapur
Dr. N. Sasikumar
Dr. Saykar Satish Govind
Dr. A. Paul Albert
Dr. Atul Hansraj Salunke
Mr. Sanjeev Kumar Mishra
Dr. Neeta Sukhendrapal Singh
Dr. Kispotta Seraphinus
Dr. Santosh Kumar Behera
Dr. Sandhya Ayaskar
Dr. S. Aravind
Dr. Sandeep V. Binorkar
Dr. Raval Sandeep Krishnat
Dr. Mahesh Nawria
Dr. Tamanna Kaushal
Dr. Deepak B. Nale
Dr. Ram Chander
Dr. Sudhir Kumar Jena
Dr. S Maxwell Lyngdoh
Dr. Bhed Pal Gangwar
Dr. Shaikh Fahemeeda
Dr. Deshai Rajesh Bhaurao

Research maGma
An International Multidisciplinary Journal
ISSN- 2456-7078 IMPACT FACTOR- 4.520
VOL-1, ISSUE-10, DEC-2017

# “ಮಿಲ್ಲುಗಳ ಮುಚ್ಚುವಿಕೆಯಿಂದಾಗಿ ಕಾರ್ಮಿಕರ ಮಕ್ಕಳ ಶಿಕ್ಷಣದ ಮೇಲಾದ ಪ್ರಭಾವ”

[೧]ರಾಘವೇಂದ್ರ.ಆರ್, [೨]ಡಾ.ಚಂದ್ರಶೇಖರ್
[೧]ಪಿಹೆಚ್.ಡಿ. ಸಂಶೋಧನಾ ವಿಧ್ಯಾರ್ಥಿ, ಸಮಾಜಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ.
[೨]ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು, ಸಮಾಜಶಾಸ್ತ್ರ ವಿಭಾಗ,ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ.

ಜಗತ್ತಿನ ಪ್ರತಿಯೊಂದು ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ಕೈಗಾರಿಕೆಗಳ ಸ್ಥಾಪನೆ, ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಕೈಗಾರಿಕೆಗಳ ಮಹತ್ವವನ್ನು ಇನ್ನೊಂದು ರೀತಿಯಲ್ಲಿ ನೋಡಿದರೆ, ನೈಸರ್ಗಿಕವಾಗಿ ದೊರೆಯುವ ಅನೇಕ ಪದಾರ್ಥಗಳನ್ನು ಅದರಲ್ಲೂ ಖನಿಜಗಳು, ಪ್ರಾಣಿಜನ್ಯ ಹಾಗೂ ಕೃಷಿ ಮೂಲದ ಪದಾರ್ಥಗಳನ್ನು ನಿರ್ಮಿಸುವಲ್ಲಿ ಕೈಗಾರಿಕೆಗಳು ಮಹತ್ವದ ಪಾತ್ರ ನಿರ್ವಹಿಸುತ್ತವೆ. ಇದರಿಂದ ದೊರೆಯುವ ಸಂಪನ್ಮೂಲಗಳನ್ನು ರೂಡಿಸಿಕೊಂಡು ಲಾಭದಾಯಕವಾಗಿ ಬೆಳಸಿಕೊಂಡು ಸಂಪತ್ತನ್ನು ಹೆಚ್ಚಿಸುವುದರ ಮೂಲಕ ಆರ್ಥಿಕ ಪ್ರಗತಿಯನ್ನು ಸಾಧಿಸಬಹುದಾಗಿದೆ.

ಮಾನವ ಬೆಳವಣಿಗೆಗೆ ದುಡಿಮೆ ಬಹಳ ಮುಖ್ಯವಾಗಿದೆ. ಸಮಾಜಕ್ಕೆ ಕಾರ್ಮಿಕರು ಕೇಂದ್ರಿಯ ಅಂಶವಾಗಿದ್ದಾರೆ. ಕೈಗಾರಿಕೆಗಳು ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ಬದಲಾವಣೆಗೆ ಬಹಳ ಮುಖ್ಯವಾಗಿದೆ. ಇದರಲ್ಲಿ ಕಾರ್ಮಿಕ ಪಾತ್ರ ಪ್ರಮುಖವಾಗಿದೆ. ಇಲ್ಲಿ ವ್ಯವಸ್ಥಿತವಾದ ಚಟುವಟಿಕೆ ಹಾಗೂ ಕಾರ್ಮಿಕ ಸಂಘಟನೆಗಳು ನೇರವಾಗಿ ಅಥವಾ ಗುತ್ತಿಗೆ ಆಧಾರದ ಮೂಲವಾಗಿ ಉತ್ಪಾದನೆಯ ಉದ್ದೇಶ, ಉತ್ಪಾದನಾ ವಸ್ತುಗಳು, ಸೇವೆ, ಮಾನವನ ಬೇಡಿಕೆಗಳು, ಅವಶ್ಯಕತೆಗಳನ್ನು ಈಡೇರಿಸುವುದು ಹೀಗೆ ಮುಂತಾದವುಗಳನ್ನು ಒಳಗೊಂಡಿರುವುದೇ ಕೈಗಾರಿಕೆ ಎನ್ನಬಹುದು. ಮಾನವ ಸಮಾಜದಲ್ಲಿ ದೊರೆಯುವಂತಹ ಕಚ್ಚಾ ವಸ್ತುಗಳನ್ನು ತೆಗೆದುಕೊಂಡು ಸಿದ್ಧ ವಸ್ತುಗಳನ್ನಾಗಿ ಮಾಡಿ ಸಮಾಜಕ್ಕೆ ನೀಡುವುದನ್ನು ನಾವು ಕೈಗಾರಿಕೆ ಎಂದು ಹೇಳಬಹುದು.

ಉತ್ಪಾದನೆ ಆಧಾರಿತ ಆರ್ಥಿಕತೆ ಭಾರತದ ಪ್ರತಿಯೊಂದು ಸಂಸ್ಥೆಗಳಲ್ಲೂ ಅಂದರೆ ಕುಟುಂಬ, ಜಾತಿ, ಧರ್ಮ, ಶಿಕ್ಷಣ ಮತ್ತು ಸ್ಥಳೀಯವಾಗಿಯೂ ಬದಲಾವಣೆಗಳನ್ನು ತಂದಿತು. ಸಮಾಜಶಾಶ್ತ್ರಜ್ಞರು, ಅರ್ಥಶಾಸ್ತ್ರಜ್ಞರು ಮತ್ತು ನೀತಿ ನಿರೂಪಕರು ವಿಶಾಲವಾಗಿ ಸಮಾಜವನ್ನು ಮತ್ತು ಸಾಮಾಜಿಕ ಗುಂಪುಗಲ್ಲಿನ ಬದಲಾದ ಸನ್ನಿವೇಶಗಳನ್ನು ಅರ್ಥೈಸುವಲ್ಲಿ ಆಸಕ್ತಿಯನ್ನು ತೋರಿದರು. ಕೈಗಾರಿಕೆಗಳು ಆಧುನಿಕ ಮಾನವ ಜೀವನದಲ್ಲಿ ಅತಿ ಮುಖ್ಯ ಅಂಶವಾಗಿದ್ದು ಕಾರ್ಮಿಕರ ವರ್ತನೆಗಳ ಬಗೆಗಿರುವ ಕಾನೂನುಗಳನ್ನು ಮತ್ತು ಕೈಗಾರಿಕೆಗಳನ್ನು ಮುಚ್ಚಿದ್ದರಿಂದ ವೈಯಕ್ತಿಕ ಜೀವನ ಮತ್ತು ಸಮಾಜದ ಮೇಲೆ ಬೀರಿದ ಪ್ರಭಾವವನ್ನು ಅರ್ಥ ಮಾಡಿಕೊಳ್ಳುವ ಅವಶ್ಯಕತೆ ಇದೆ. ಭಾರತೀಯ ಸಮಾಜದಲ್ಲಿ ಕೃಷಿ ಅತಿಮುಖ್ಯ ಕಸುಬುವಾಗಿದ್ದು ಮತ್ತು ಕೈಗಾರಿಕೆಗಳು ಉಪಕಸುಬುಗಳಾಗಿವೆ. ಪ್ರಾಚೀನ ಕಾಲದಿಂದಲೂ ಭಾರತವು ಜವಳಿ ಉತ್ಪಾದನೆಗೆ ಹೆಸರಾಗಿದೆ. ಬ್ರಿಟಿಷ್ ವಸಹಾತುಶಾಹಿ ಆಡಳಿತದಿಂದಾಗಿ ಭಾರತದಲ್ಲಿನ ಸಾಂಪ್ರದಾಯಿಕ ಜವಳಿ ಉದ್ಯಮ ನಾಶವಾಗಿತ್ತೆಂದು ಹೇಳಬಹುದು.

ಪ್ರಸ್ತುತ ಅಧ್ಯಯನವು ಕರ್ನಾಟಕ ರಾಜ್ಯದ ದಾವಣಗೆರೆ ನಗರದ ದಾವಣಗೆರೆ ಕಾಟನ್ ಮಿಲ್ಲಿನ  ಕಾರ್ಮಿಕರಿಗೆ

ಮತ್ತು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ್ದಾಗಿದೆ. ದಾವಣಗೆರೆ ನಗರದಲ್ಲಿ ಒಟ್ಟು ೦೮ ಕಾಟನ್ ಮಿಲ್‌ಗಳು ಇದ್ದವು. ಆ ಎಂಟು ಕಾಟನ್ ಮಿಲ್‌ಗಳು ಖಾಸಗಿಯವರಿಂದ ಸ್ಥಾಪಿಸಲ್ಪಟ್ಟವು.ಈ ಹತ್ತಿ ಗಿರಣಿಗಳಲ್ಲಿ ಸಾವಿರಾರು ಕಾರ್ಮಿಕರಿಗೆ ಉದ್ಯೋಗ ಸೃಷ್ಟಿಯಾಯಿತು. ಆದರೆ ಕಾಲಕ್ರಮೇಣ ೦೭ ಹತ್ತಿ ಗಿರಣಿಗಳು ಒಂದಾದ ಮೇಲೊಂದು ಅವನತಿಯತ್ತೆಸಾಗಿ ಅಂತಿಮವಾಗಿ ೦೧ ಮಾತ್ರ ಉಳಿದು ಕೊಂಡಿವೆ. ಅವನತಿಗೆ ಒಳಗಾದ ಹತ್ತಿಗಿರಣಿಗಳಲ್ಲಿ ಒಂದಾದ ದಾವಣಗೆರೆ ಕಾಟನ್ ಮಿಲ್ಲಿನ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಕುರಿತು ಸಂಶೋಧನೆಯನ್ನು ಅಧ್ಯಯನವನ್ನು ಕೇಂದ್ರಿಕರಿಸಲಾಗಿದೆ.

## ದಾವಣಗೆರೆ ಕಾಟನ್ ಮಿಲ್ ಲಿಮಿಟೆಡ್

ದಾವಣಗೆರೆ ಕಾಟನ್ ಮಿಲ್ ಇಡೀ ಏಷ್ಯಾದಲ್ಲಿ ಹೆಸರುಗಳಿಸಿರುವ ಏಕೈಕ ಮಿಲ್ ಆಗಿತ್ತು. ಈ ಮಿಲ್‌ನ್ನು 'ಕರ್ನಾಟಕದ ಮ್ಯಾಂಚೆಸ್ಟರ್' ಎಂದೇ ಬಿರುದು ಪಡೆದಿತ್ತು. ಏಕೆಂದರೆ ಮಿಲ್‌ನಲ್ಲಿ ಉತ್ಪಾದನೆಯಾಗುತ್ತಿದ್ದ ಉತ್ತಮ ಗುಣಮಟ್ಟದ ಹತ್ತಿ ಮತ್ತು ಬಟ್ಟೆಗಳಿಂದಾಗಿ ಹೆಸರು ಪಡೆದಿತ್ತು. ೧೯೩೩ರಲ್ಲಿ ಶ್ರೀ ರಾಜನಹಳ್ಳಿ ಹನುಮಂತಪ್ಪನವರು ಹತ್ತಿ ಗಿರಣಿಯ ಯೋಜನೆಯನ್ನು ಹಾಕಿಕೊಂಡರು. ಹಾಗಾಗಿ ೨೨-೦೩-೧೯೩೬ರಲ್ಲಿ ದಾವಣಗೆರೆ ಕಾಟಲ್ ಮಿಲ್ ಅನ್ನು ಸ್ಥಾಪಿಸಲಾಯಿತು. ಈ ಮಿಲ್ಲಿನಲ್ಲಿ ನೂಲು ಮತ್ತು ಹತ್ತಿ ಬಟ್ಟೆಯನ್ನು ರೆಯಾಗ್‌ಸಿಲ್ಕು ತಯಾರಾಗುತ್ತಿತ್ತು. ಈ ಮಿಲ್ಲಿನಲ್ಲಿ ತಯಾರಾದ ನೂಲು ಬಟ್ಟೆ ತನ್ನ ಗುಣಮಟ್ಟದಿಂದ ದಾವಣಗೆರೆಯಿಂದ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿಯಾಗಿ ಡಿ.ಸಿಎಂ ಎಂದು ಗುರುತಿಸಲ್ಪಟ್ಟು ಕೈಗಾರಿಕೋದ್ಯಮದಲ್ಲಿ ದಾವಣಗೆರೆಯನ್ನು ಕೇಂದ್ರ ಬಿಂದುವಾಗಿಸಿತು. ದಾವಣಗೆರೆ ಲಾಂಗ್‌ಕ್ಲಾತ್ ಬಟ್ಟೆಗೆ ಎಲ್ಲೆಡೆ ಪ್ರಸಿದ್ಧಿ ಪಡೆದಿತ್ತು.

ಆಧುನಿಕ ಯಂತ್ರೋಪಕರಣಗಳಿಂದ ಕೂಡಿದ್ದು ಮಿಲ್ಲಿನ ಶ್ರೇಯೋಭಿವೃದ್ಧಿಗಾಗಿ ಹಗಲಿರಳು ಶ್ರಮಿಸುವ ಸುಮಾರು ೨೫೦೦ ಜನ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದರು. ಈ ಭಾಗದ ಜನರಿಗೆ ಈ ಗಿರಣಿಯು ಜೀವ ನೀಡಿದ್ದ ಗಿರಣಿಯಾಗಿತ್ತು. ೩೧-೩-೧೯೮೮ರ ಕಾಲಕ್ಕೆ ೨.೫೯,೮೧೧ ಲಕ್ಷ ರೂಗಳ ವಿದೇಶಿ ವ್ಯಾಪಾರ ನಡೆಸಿ ಮಹತ್ವ ಪಡೆದುಕೊಂಡಿದ್ದ ಮಿಲ್‌ಲಾಗಿತ್ತು. ಮಿಲ್ಲಿನ ಮಾಲೀಕರು ಕಾರ್ಮಿಕರ ಕುಟುಂಬಕೋಸ್ಕರ ವಸತಿ ಸೌಲಭ್ಯ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲೆ, ಆಸ್ಪತ್ರೆ, ವಾಚನಾಲಯ, ಸಾರಿಗೆ ಸೌಲಭ್ಯಗಳನ್ನು ವ್ಯವಸ್ಥಿತವಾಗಿ ರೂಡಿಸಿತ್ತು.

ಆದರೆ ಕಾಲ ಕಳೆದಂತೆ ದಾವಣಗೆರೆ ಕಾಟನ್ ಮಿಲ್ಲು ಅನೇಕ ಸಮಸ್ಯೆಗಳ ಸುಳಿಗೆ ಸಿಕ್ಕಿ ಅಂತಿಮ ಅವಸಾನದತ್ತ ಸಾಗಿದಾಗ ಶ್ರೀ ಮೂರಾರ್ಜಿ ಆಡಳಿತ ವರ್ಗ ಮಿಲ್ಲನ್ನು ಖರೀದಿಸಿತು. ಆದರೆ ಮಾಲೀಕರ ನಿರ್ಲಕ್ಷ್ಯದಿಂದ ಮತ್ತು ಆಡಳಿತ ವರ್ಗದವರ ಕುತಂತ್ರಗಳಿಂದ ಹಾಗೂ ಕಾರ್ಮಿಕರ ಹೊಂದಾಣಿಕೆ ಮನೋಭಾವದ ಕೊರತೆಯಿಂದಾಗಿ ಕಾಟನ್ ಮಿಲ್ ಬದುಕು ಉಳಿಯಲಿಲ್ಲ ಸುಮಾರು ೬೫ ವರ್ಷ ತನ್ನ ಸಾಧನೆಯಿಂದ ಕರ್ನಾಟಕದ ಮ್ಯಾಂಚೆಸ್ಟರ್ ಎಂದು ದಾವಣಗೆರೆಗೆ ತಂದಿದ್ದ ಹೆಸರು ಬರಿ ನೆನಪಾಗಿ ಉಳಿಸಿ ೨೦೦೦ನೇ ವರ್ಷದಲ್ಲಿ ಶಾಶ್ವತವಾಗಿ ಮುಚ್ಚಲ್ಪಟ್ಟಿತು.

ಕಾಟನ್ ಮಿಲ್ ಮುಚ್ಚಿದ್ದರಿಂದ ಕಾರ್ಮಿಕರ ಜೀವನ ದುಸ್ಥರವಾಗಿತ್ತು ಸುಮಾರು ೨೫೦೦ ಕಾರ್ಮಿಕರು ನಿರ್ಗತಿಕರಾದರು. ಈ ಕಾರ್ಮಿಕರಲ್ಲಿ ಅನೇಕರು ಬೇರೆ ಪ್ರದೇಶದಿಂದ ವಲಸೆ ಬಂದ ವರಾಗಿದ್ದರು. ಇದ್ದರಿಂದಾಗಿ ಅವರ ಜೀವನ ಮತ್ತು ಕುಟುಂಬದ ಮೇಲೆ ಸಾಕಷ್ಟು ದುಷ್ಪರಿಣಾಮಗಳಾದವು. ಈ ಕಾರ್ಮಿಕರಿಗೆ ಆಡಳಿತ ಮಂಡಳಿಯಿಂದ ಸ್ವಲ್ಪ ಪ್ರಮಾಣದ ಆರ್ಥಿಕ ಸಹಾಯವನ್ನು ಕಲ್ಪಿಸಿದರೂ ಸಹ ಕಾರ್ಮಿಕರ ಜೀವನ ನಡೆಸುವುದು ಕಷ್ಟಕರವಾಯಿತು. ದಿನನಿತ್ಯದ ಊಟಕ್ಕೂ ಸಹ ಗತಿ ಇಲ್ಲದ ಸ್ಥಿತಿಯಾಗಿದೆ. ಅಷ್ಟೆ ಅಲ್ಲದೇ ದಾವಣಗೆರೆ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಮೇಲೆ ಸಹ ಅನೇಕ ಪರಿಣಾಮಗಳು ಉಂಟಾದವು. ಇಂದು ಡಿ.ಸಿ.ಎಂ ಮಿಲ್ ಇದ್ದ ಸ್ಥಳವನ್ನು ಡಿ.ಸಿಎಂ ಟ್‌ನ್‌ಷಿಪ್ ಎಂದು ಪರಿವರ್ತನೆ ಮಾಡಿ ನಿವೇಶಗಳನ್ನು ಮಾರಾಟ ಮಾಡಲಾಗುತ್ತಿದೆ. ಸಾವಿರಾರು ಜನರಿಗೆ ಉದ್ಯೋಗ ನೀಡಿದ್ದ, ಆಶ್ರಯ ನೀಡಿದ್ದ ಮಿಲ್ಲಿನ ಪ್ರದೇಶ ಸಾರ್ವಜನಿಕ ನಿವಾಸ ಸ್ಥಳವಾಗಿದ್ದು, ಕಾರ್ಮಿಕರು ಬೀದಿ ಪಾಲಾದದ್ದು ದುರದೃಷ್ಟಕರ.

## ಉದ್ದೇಶಗಳು

ಕಾರ್ಮಿಕರ ಮಕ್ಕಳ ಕ್ರಿಯಾಶೀಲತೆ (ಚಲನಾಶೀಲತೆ) ಯನ್ನು ಪರೀಕ್ಷಿಸುವುದು.
ಕಾರ್ಮಿಕರ ಮಕ್ಕಳ ಶೈಕ್ಷಣಿಕ ಸ್ಥಿತಿಗತಿಯನ್ನು ತಿಳಿಯುವುದು.

## ಅಧ್ಯಯನದ ಜನಸಂಖ್ಯೆ ಮತ್ತು ಮಾದರಿ ವಿಧಾನ

ಪ್ರಸ್ತುತ ಸಂಶೋಧನೆಗಾಗಿ ದಾವಣಗೆರೆ ನಗರವನ್ನು ಆಯ್ಕೆಮಾಡಿಕೊಂಡು ಈ ವ್ಯಾಪ್ತಿಯಲ್ಲಿ ನೆಲೆಸಿರುವ ಕಾರ್ಮಿಕರು ಮತ್ತು ಮಕ್ಕಳ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸರಳ ಯಾದೃಚ್ಛಿಕ ಮಾದರಿ ವಿಧಾನದಿಂದ ೧೦೦ಕುಟುಂಬಗಳನ್ನು ಆಯ್ಕೆಮಾಡಿಕೊಂಡು ಸಂದರ್ಶನ ಅನುಸೂಚಿ ಮತ್ತು ಅವಲೋಕನದ ಸಹಾಯದಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಮಾದರಿ ವಿಧಾನವು ಕಾಟನ್ ಮಿಲ್ಲಿನಲ್ಲಿ ಕೆಲಸ ಮಾಡುತ್ತಿದ್ದ ಎಲ್ಲಾ ಕಾರ್ಮಿಕರ

ಮಕ್ಕಳನ್ನು ಪ್ರತಿನಿಧಿಸುವಂತೆ ಆಯ್ಕೆ ಮಾಡಿಕೊಳ್ಳಲಾಗಿದೆ.

## ಸಂಶೋಧನಾ ತಂತ್ರಗಳು ಮತ್ತು ಮಾಹಿತಿ ಮೂಲಗಳು

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮೂಲಗಳ ಸಹಾಯದಿಂದ ಸಂದರ್ಶನ ಅನುಸೂಚಿಯನ್ನು ಬಳಸಿಕೊಂಡು ಆಯ್ಕೆ ಮಾಡಿದ ಫಲಾನುಭವಿಗಳನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಹಾಗೂ ಮಾಧ್ಯಮಿಕ ಮಾಹಿತಿ ಮೂಲಗಳ ಸಂಶೋಧನಾ ಲೇಖನಗಳು, ವಿಷಯ ವಿಶ್ವಕೋಶ, ಪತ್ರಿಕೆಗಳು, ಪ್ರಬಂಧಗಳು, ಇಲಾಖೆಯ ಮಾರ್ಗದರ್ಶನ ಅನುಸೂಚಿಗಳು, ಇನ್ನೂ ಮುಂತಾದ ವಿಧಾನಗಳಿಂದ ಮಾಹಿತಿಯನ್ನು ಸಂಗ್ರಹಿಸಿ ವರದಿಯನ್ನು ತಯಾರಿಸಲಾಗಿದೆ.

ಸಂಶೋಧನೆಯಲ್ಲಿ ವ್ಯಕ್ತವಾದ ಅಂಶಗಳು

ಪ್ರಸ್ತುತ ಸಂಶೋಧನೆಯಲ್ಲಿ ವ್ಯಕ್ತವಾದ ಅಂಶಗಳನ್ನು ಕೆಳಕಂಡ ಕೋಷ್ಟಕಗಳಲ್ಲಿ ಶೇಕಡಾವಾರು ವಿಭಾಗಿಸಿ ವಾಸ್ತವಿಕ ನೆಲೆಗಟ್ಟಿನಲ್ಲಿ ಚರ್ಚಿಸಿ ವಿಶ್ಲೇಷಣೆ ಮಾಡಲಾಗಿದೆ.

ಕೋಷ್ಟಕ-೧ ಮಾಹಿತಿದಾರರ ಕಾರ್ಖಾನೆ ಮುಚ್ಚಿದ ಸಂದರ್ಭದಲ್ಲಿಮಕ್ಕಳ ಶೈಕ್ಷಣಿಕ ವಿವರ

| ಗಂಡು ಮಕ್ಕಳ ಶಿಕ್ಷಣ | | | ಹೆಣ್ಣುಮಕ್ಕಳ ಶಿಕ್ಷಣ | | |
|---|---|---|---|---|---|
| ಶೈಕ್ಷಣಿಕ ಮಟ್ಟ | ಅವೃತ್ತಿ | ಶೇಕಡಾವಾರು | ಶೈಕ್ಷಣಿಕ ಮಟ್ಟ | ಅವೃತ್ತಿ | ಶೇಕಡಾವಾರು |
| ಅನಕ್ಷರಸ್ಥರು | ೨೦ | ೧೧.೩೬ | ಅನಕ್ಷರಸ್ಥರು | ೨೩ | ೨೩.೦೦ |
| ಪ್ರಾಥಮಿಕ ಶಿಕ್ಷಣ | ೨೭ | ೧೫.೩೪ | ಪ್ರಾಥಮಿಕ ಶಿಕ್ಷಣ | ೧೪ | ೧೩.೩೩ |
| ಮಾಧ್ಯಮಿಕ ಶಿಕ್ಷಣ | ೪೦ | ೨೨.೭೨ | ಮಾಧ್ಯಮಿಕ ಶಿಕ್ಷಣ | ೨೪ | ೨೨.೮೫ |
| ಪ್ರೌಢ ಶಿಕ್ಷಣ | ೫೪ | ೩೦.೬೮ | ಪ್ರೌಢ ಶಿಕ್ಷಣ | ೩೨ | ೩೦.೪೭ |
| ಪದವಿ ಪೂರ್ವಶಿಕ್ಷಣ | ೨೦ | ೧೧.೩೬ | ಪದವಿ ಪೂರ್ವಶಿಕ್ಷಣ | ೦೭ | ೬.೬೬ |
| ಪದವಿ ಶಿಕ್ಷಣ | ೦೯ | ೫.೧೧ | ಪದವಿ ಶಿಕ್ಷಣ | ೦೪ | ೩.೮೦ |
| ಸ್ನಾತಕೋತ್ತರ ಶಿಕ್ಷಣ | ೦೧ | ೦.೫೬ | ಸ್ನಾತಕೋತ್ತರ ಶಿಕ್ಷಣ | ೦೦ | ೦೦.೦೦ |
| ವೃತ್ತಿಪರ ಶಿಕ್ಷಣ | ೦೫ | ೨.೮೪ | ವೃತ್ತಿಪರ ಶಿಕ್ಷಣ | ೦೧ | ೦.೯೫ |
| ಒಟ್ಟು | ೧೭೬ | ೧೦೦.೦೦ | ಒಟ್ಟು | ೧೦೫ | ೧೦೦.೦೦ |

ಈ ಕೋಷ್ಟಕದಿಂದ ತಿಳಿದು ಬರುವ ಅಂಶಗಳನೇಂದರೆ, ಕಾರ್ಖಾನೆ ಮುಚ್ಚಿದ ಸಂದರ್ಭದಲ್ಲಿ ಕಾರ್ಮಿಕರ ಗಂಡು ಮಕ್ಕಳ ಶೈಕ್ಷಣಿಕ ಮಟ್ಟವನ್ನು ಸಂಶೋಧನಾ ಆಯ್ಕೆಗೆ ಒಳಪಟ್ಟ ಕಾರ್ಮಿಕರ ಮಕ್ಕಳಲ್ಲಿ ೨೦(ಶೇ೧೧.೩೬%) ರಷ್ಟು ಅನಕ್ಷರಸ್ಥರಾಗಿದ್ದು ಯಾವುದೇ ಶಿಕ್ಷಣವನ್ನು ಪಡೆದಿರುವುದಿಲ್ಲಾ.

ಪ್ರಾಥಮಿಕ ಶಿಕ್ಷಣವನ್ನು ೨೭(ಶೇ೧೫.೩೪%), ಮಾಧ್ಯಮಿಕ ಶಿಕ್ಷಣವನ್ನು ೪೦(ಶೇ೨೨.೭೨%), ಪ್ರೌಢ ಶಿಕ್ಷಣವನ್ನು ೫೪(ಶೇ೩೦.೬೮%), ಪದವಿ ಪೂರ್ವಶಿಕ್ಷಣವನ್ನು ೨೦(ಶೇ೧೧.೩೬%) ಪದವಿ ಶಿಕ್ಷಣವನ್ನು ೦೯(ಶೇ೫.೧೧%), ಸ್ನಾತಕೋತ್ತರ ಶಿಕ್ಷಣವನ್ನು ೦೧(ಶೇ೦.೫೬%), ವೃತ್ತಿಪರ ಶಿಕ್ಷಣವನ್ನು ೦೫(ಶೇ೨.೮೪%) ರಷ್ಟು ಹೊಂದಿರುತ್ತಾರೆ. ಕಾರ್ಖಾನೆ ಮುಚ್ಚಿದ ಸಂದರ್ಭದಲ್ಲಿ ಕಾರ್ಮಿಕರ ಮಕ್ಕಳಲ್ಲಿ ಪ್ರೌಢ ಶಿಕ್ಷಣವನ್ನು ೫೪(ಶೇ೩೦.೬೮%) ಹೊಂದಿದವರು ಹೆಚ್ಚಾಗಿದ್ದು, ಪದವಿಶಿಕ್ಷಣವನ್ನು ೦೯(ಶೇ೫.೧೧%) ಮತ್ತು ಸ್ನಾತಕೋತ್ತರ ಶಿಕ್ಷಣವನ್ನು ೦೧(ಶೇ೦.೫೬%) ಹೊಂದಿರುವವರ ಸಂಖ್ಯೆ ಕಡಿಮೆ ಇರುವುದು ಕಂಡುಬರುತ್ತದೆ.

ಅದೇ ರೀತಿ ಕಾರ್ಮಿಕರ ಹೆಣ್ಣು ಮಕ್ಕಳ ಶೈಕ್ಷಣಿಕ ಮಟ್ಟವನ್ನು ಗಮನಿಸಿದರೆ, ಅನಕ್ಷರಸ್ಥರು೨೩(ಶೇ೨೩.೦೦%), ಪ್ರಾಥಮಿಕಶಿಕ್ಷಣವನ್ನು ೧೪(ಶೇ೧೩.೩೩%), ಮಾಧ್ಯಮಿಕಶಿಕ್ಷಣವನ್ನು ೨೪(ಶೇ೨೨.೮೫%), ಪ್ರೌಢಶಿಕ್ಷಣವನ್ನು೩೨(ಶೇ೩೦.೪೭%), ಪದವಿ ಪೂರ್ವಶಿಕ್ಷಣವನ್ನು ೦೭(ಶೇ೬.೬೬%), ಪದವಿ ಶಿಕ್ಷಣವನ್ನು ೦೪(ಶೇ೩.೮೦%), ವೃತ್ತಿಪರ ಶಿಕ್ಷಣವನ್ನು೦೧(೦.೯೫%) ರಷ್ಟು ಹೊಂದಿರುತ್ತಾರೆ. ಇದರಲ್ಲಿ ಪ್ರೌಢಶಿಕ್ಷಣವನ್ನು೩೨(ಶೇ೩೦.೪೭%) ಹೊಂದಿದವರು ಹೆಚ್ಚಾಗಿದ್ದು, ವೃತ್ತಿಪರ ಶಿಕ್ಷಣವನ್ನು ೦೧(೦.೯೫%) ಹೊಂದಿರುವವರ ಸಂಖ್ಯೆ ಕಡಿಮೆ ಇರುವುದು ಕಂಡುಬರುತ್ತದೆ.

ಒಟ್ಟಾರೆ ಕಾರ್ಖಾನೆ ಮುಚ್ಚಿದ ಸಂದರ್ಭದಲ್ಲಿ ಮಕ್ಕಳ ಶೈಕ್ಷಣಿಕ ಮಟ್ಟದಲ್ಲಿ ಗಂಡು ಮಕ್ಕಳ ಸಂಖ್ಯೆ ಹೆಣ್ಣು ಮಕ್ಕಳ ಸಂಖ್ಯೆಗಿಂತಲೂ ಹೆಚ್ಚಾಗಿರುವುದು. ಹೆಣ್ಣು ಮಕ್ಕಳ ಶಿಕ್ಷಣಮಟ್ಟಕ್ಕಿಂತ ಗಂಡು ಮಕ್ಕಳ ಶಿಕ್ಷಣಮಟ್ಟ ಉತ್ತಮ ಮಟ್ಟದಲ್ಲಿದೆ. ಅಲ್ಲದೇ ಗಂಡು ಮಕ್ಕಳ ಅನಕ್ಷರತೆಗಿಂತಲೂ ಹೆಣ್ಣು ಮಕ್ಕಳು ಹೆಚ್ಚು ಅನಕ್ಷರಸ್ಥರಾಗಿರುವುದು ತಿಳಿದು ಬರುತ್ತದೆ.

### ಕೋಷ್ಠಕ-೨ ಮಾಹಿತಿದಾರರ ಮಕ್ಕಳ ಪ್ರಸ್ತುತ ಶೈಕ್ಷಣಿಕ ವಿವರ

| ಗಂಡು ಮಕ್ಕಳ ಶಿಕ್ಷಣ | | | ಹೆಣ್ಣುಮಕ್ಕಳ ಶಿಕ್ಷಣ | | |
|---|---|---|---|---|---|
| ಶೈಕ್ಷಣಿಕ ಮಟ್ಟ | ಅವೃತ್ತಿ | ಶೇಕಡಾವಾರು | ಶೈಕ್ಷಣಿಕ ಮಟ್ಟ | ಅವೃತ್ತಿ | ಶೇಕಡಾವಾರು |
| ಅನಕ್ಷರಸ್ಥರು | ೨೦ | ೧೦.೯೮ | ಅನಕ್ಷರಸ್ಥರು | ೨೩ | ೨೦.೦೦ |
| ಪ್ರಾಥಮಿಕ ಶಿಕ್ಷಣ | ೦೪ | ೨.೧೯ | ಪ್ರಾಥಮಿಕ ಶಿಕ್ಷಣ | ೦೨ | ೧.೭೩ |
| ಮಾಧ್ಯಮಿಕ ಶಿಕ್ಷಣ | ೧೫ | ೮.೨೪ | ಮಾಧ್ಯಮಿಕ ಶಿಕ್ಷಣ | ೧೩ | ೧೧.೩೦ |
| ಪ್ರೌಢ ಶಿಕ್ಷಣ | ೫೯ | ೩೨.೪೧ | ಪ್ರೌಢಶಿಕ್ಷಣ | ೩೫ | ೩೦.೪೩ |
| ಪದವಿ ಪೂರ್ವಶಿಕ್ಷಣ | ೨೫ | ೧೩.೭೩ | ಪದವಿ ಪೂರ್ವಶಿಕ್ಷಣ | ೧೯ | ೧೬.೫೨ |
| ಪದವಿ ಶಿಕ್ಷಣ | ೩೦ | ೧೬.೪೮ | ಪದವಿ ಶಿಕ್ಷಣ | ೧೩ | ೧೧.೩೦ |
| ಸ್ನಾತಕೋತ್ತರ ಶಿಕ್ಷಣ | ೦೭ | ೩.೮೪ | ಸ್ನಾತಕೋತ್ತರಶಿಕ್ಷಣ | ೦೧ | ೦.೮೬ |
| ವೃತ್ತಿಪರ ಶಿಕ್ಷಣ | ೨೨ | ೧೨.೦೮ | ವೃತ್ತಿಪರ ಶಿಕ್ಷಣ | ೦೯ | ೭.೮೨ |
| ಒಟ್ಟು | ೧೮೨ | ೧೦೦.೦೦ | ಒಟ್ಟು | ೧೧೫ | ೧೦೦.೦೦ |

ಈ ಕೋಷ್ಟಕದಿಂದ ತಿಳಿದು ಬರುವ ಅಂಶಗಳನೇಂದರೆ, ಕಾರ್ಮಿಕರ ಗಂಡು ಮಕ್ಕಳ ಪ್ರಸ್ತುತ ಶೈಕ್ಷಣಿಕ ಮಟ್ಟವನ್ನು ಗಮನಿಸಿದರೆ ಅನಕ್ಷರಸ್ಥರು೨೦(ಶೇ೧೦.೯೮%), ಪ್ರಾಥಮಿಕ ಶಿಕ್ಷಣವನ್ನು ೦೪(ಶೇ೨.೧೯%), ಮಾಧ್ಯಮಿಕ ಶಿಕ್ಷಣವನ್ನು ೧೫(ಶೇ೮.೨೪%), ಪ್ರೌಢ ಶಿಕ್ಷಣವನ್ನು ೫೯(ಶೇ೩೨.೪೧%), ಪದವಿ ಪೂರ್ವಶಿಕ್ಷಣವನ್ನು ೨೫(ಶೇ೧೩.೭೩%), ಪದವಿ ಶಿಕ್ಷಣವನ್ನು ೩೦(ಶೇ೧೬.೪೮%), ಸ್ನಾತಕೋತ್ತರ ಶಿಕ್ಷಣವನ್ನು ೦೭(ಶೇ೩.೮೪%), ವೃತ್ತಿಪರ ಶಿಕ್ಷಣವನ್ನು ೨೨(ಶೇ೧೨.೦೮%) ರಷ್ಟು ಹೊಂದಿರುತ್ತಾರೆ. ಪ್ರೌಢ ಶಿಕ್ಷಣ, ಪದವಿ ಪೂರ್ವಶಿಕ್ಷಣ, ವೃತ್ತಿಪರ ಶಿಕ್ಷಣ ಹೊಂದಿರುವವರ ಸಂಖ್ಯೆ ಹೆಚ್ಚಾಗಿದ್ದು, ಪ್ರಾಥಮಿಕ ಶಿಕ್ಷಣ, ಸ್ನಾತಕೋತ್ತರ ಶಿಕ್ಷಣವನ್ನು ಪಡೆದಿರುವವರ ಸಂಖ್ಯೆ ಕಡಿಮೆ ಇರುವುದು ಕಂಡುಬರುತ್ತದೆ.

ಹಾಗೆಯೇ ಕಾರ್ಮಿಕರ ಹೆಣ್ಣು ಮಕ್ಕಳ ಪ್ರಸ್ತುತ ಶೈಕ್ಷಣಿಕ ಮಟ್ಟವನ್ನು ಗಮನಿಸಿದರೆ, ಅನಕ್ಷರಸ್ಥರು೨೩(ಶೇ೨೦.೦೦%)ಪ್ರಾಥಮಿಕ ಶಿಕ್ಷಣವನ್ನು ೦೨(ಶೇ೧.೭೩%), ಮಾಧ್ಯಮಿಕ ಶಿಕ್ಷಣವನ್ನು ೧೩(ಶೇ೧೧.೩೦%), ಪ್ರೌಢಶಿಕ್ಷಣವನ್ನು ೩೫(ಶೇ೩೦.೪೩%), ಪದವಿ ಪೂರ್ವಶಿಕ್ಷಣವನ್ನು೧೯(ಶೇ೧೬.೫೨%), ಪದವಿ ಶಿಕ್ಷಣವನ್ನು ೧೩(ಶೇ೧೧.೩೦%), ಸ್ನಾತಕೋತ್ತರಶಿಕ್ಷಣವನ್ನು೦೧(ಶೇ೦.೮೬%), ವೃತ್ತಿಪರ ಶಿಕ್ಷಣವನ್ನು ೦೯(ಶೇ೭.೮೨%) ರಷ್ಟು ಹೊಂದಿರುತ್ತಾರೆ. ಇದರಲ್ಲಿ ಪ್ರೌಢಶಿಕ್ಷಣವನ್ನು ೩೫(ಶೇ೩೦.೪೩%) ಪಡೆದಿರುವವರ ಸಂಖ್ಯೆ ಹೆಚ್ಚಾಗಿದ್ದು, ಸ್ನಾತಕೋತ್ತರ ಶಿಕ್ಷಣವನ್ನು ೦೭(ಶೇ೩.೮೪%) ಮತ್ತು ಪ್ರಾಥಮಿಕ ಶಿಕ್ಷಣವನ್ನು ೦೨(ಶೇ೧.೭೩%) ಪಡೆದಿರುವವರ ಸಂಖ್ಯೆ ಕಡಿಮೆ ಇರುವುದು ಕಂಡುಬರುತ್ತದೆ. ಕಾರ್ಮಿಕರ ಮಕ್ಕಳ ಪ್ರಸ್ತುತ ಶೈಕ್ಷಣಿಕ ಮಟ್ಟದಲ್ಲಿ ಗಂಡು ಮಕ್ಕಳ ಸಂಖ್ಯೆಯು ಹೆಣ್ಣು ಮಕ್ಕಳ ಸಂಖ್ಯೆಗಿಂತಲೂ ಹೆಚ್ಚಾಗಿರುವುದು. ಒಟ್ಟು ಶಿಕ್ಷಣ ಪಡೆದವರ ಸಂಖ್ಯೆಯಲ್ಲಿಯೂ ಕೂಡ ಗಂಡು ಮಕ್ಕಳ ಸಂಖ್ಯೆಯು ಹೆಚ್ಚಾಗಿರುವುದು ತಿಳಿದು ಬರುತ್ತದೆ.

### ಕೋಷ್ಠಕ-೩ ಮಾಹಿತಿದಾರರ ಮಕ್ಕಳ ಪ್ರಸ್ತುತ ಉದ್ಯೋಗದ ಸ್ವರೂಪ

| ಗಂಡು ಮಕ್ಕಳ ಉದ್ಯೋಗ | | | ಹೆಣ್ಣು ಮಕ್ಕಳಉದ್ಯೋಗ | | |
|---|---|---|---|---|---|
| ಉದ್ಯೋಗದ ಸ್ವರೂಪ | ಅವೃತ್ತಿ | ಶೇಕಡಾವಾರು | ಉದ್ಯೋಗದ ಸ್ವರೂಪ | ಅವೃತ್ತಿ | ಶೇಕಡಾವಾರು |
| ದಿನಗೂಲಿ | ೧೧೨ | ೬೩.೬೩ | ದಿನಗೂಲಿ | ೧೦ | ೯.೫೨ |
| ಸರ್ಕಾರಿ | ೦೬ | ೩.೪೦ | ಸರ್ಕಾರಿ | ೦೧ | ೦.೯೫ |
| ಖಾಸಗಿ | ೨೫ | ೧೪.೨೦ | ಖಾಸಗಿ | ೦೮ | ೭.೬೧ |
| ವ್ಯಾಪಾರ | ೧೪ | ೭.೯೫ | ವ್ಯಾಪಾರ | ೦೦ | ೦೦.೦೦ |
| ಸ್ವಯಂ ಉದ್ಯೋಗ | ೧೫ | ೮.೫೨ | ಸ್ವಯಂ ಉದ್ಯೋಗ | ೦೩ | ೨.೮೫ |
| ವ್ಯಾಸಂಗ | ೦೪ | ೨.೨೭ | ವ್ಯಾಸಂಗ | ೦೦ | ೦೦.೦೦ |
| ದುಡಿಯುತ್ತಿಲ್ಲಾ | ೦೦ | ೦೦.೦೦ | ದುಡಿಯುತ್ತಿಲ್ಲಾ | ೮೩ | ೭೯.೦೪ |
| ಒಟ್ಟು | ೧೭೬ | ೧೦೦.೦೦ | ಒಟ್ಟು | ೧೦೫ | ೧೦೦.೦೦ |

ಈ ಕೋಷ್ಟಕದಿಂದ ತಿಳಿದು ಬರುವ ಅಂಶಗಳನೇಂದರೆ, ಕಾರ್ಮಿಕರ ಗಂಡು ಮಕ್ಕಳ ಪ್ರಸ್ತುತ ಉದ್ಯೋಗವನ್ನು ಗಮನಿಸಿದರೆ, ದಿನಗೂಲಿ೧೧೨(ಶೇ೬೩.೬೩%), ಸರ್ಕಾರಿ ೦೬ (ಶೇ೩.೪೦%), ಖಾಸಗಿ೨೫(ಶೇ೧೪.೨೦%), ವ್ಯಾಪಾರ

೧೪(ಶೇ೭.೯೫%), ಸ್ವಯಂ ಉದ್ಯೋಗ೧೫(ಶೇ೮.೫೨%), ವ್ಯಾಸಂಗ೦೪(ಶೇ೨.೨೭%) ರಷ್ಟು ಇರುವುದು ತಿಳಿದು ಬರುತ್ತದೆ. ಕಾರ್ಮಿಕರ ಸಾಮಾಜಿಕ ಆರ್ಥಿಕ ಸ್ಥಿತಿಗತಿಯನ್ನು ತಿಳಿಯುವಲ್ಲಿ ಮಕ್ಕಳ ವೃತ್ತಿಯು ಬಹಳ ಪ್ರಾಮುಖ್ಯತೆ ಪಡೆದಿದೆ. ಸೂಸನಾದಾರರ ಗಂಡು ಮಕ್ಕಳಲ್ಲಿ ಉದ್ಯೋದಕ್ಕೆ ಸಂಬಂಧಿಸಿದಂತೆ ಬಹುಸಂಖ್ಯಾಂತ ಮಕ್ಕಳು ದಿನಗೂಲಿ ೧೧೨(ಶೇ೬೩.೬೩%) ವೃತ್ತಿಯಲ್ಲಿ ನಿರತರಾಗಿದ್ದಾರೆ. ಖಾಸಗಿ೨೫(ಶೇ೧೪.೨೦%) ಮತ್ತು ಸರ್ಕಾರಿ ೦೬ (ಶೇ೩.೪೦%) ವೃತ್ತಿಯಲ್ಲಿ ನಿರತರಾಗಿರುವುದು ಕಂಡು ಬರುತ್ತದೆ. ಕಾರ್ಮಿಕರ ಮಕ್ಕಳು ಲಾಭದಾಯಕ ವೃತ್ತಿಯಲ್ಲಿ ತೊಡಗಿಲ್ಲದಿರುವುದು ಕಂಡು ಬರುತ್ತದೆ.

ಅದೇ ರೀತಿ ಪ್ರಸ್ತುತ ಹೆಣ್ನು ಮಕ್ಕಳ ವೃತ್ತಿಯನ್ನು ಗಮನಿಸಿದರೆ, ದಿನಗೂಲಿ೧೦(ಶೇ೯.೫೨%), ಸರ್ಕಾರಿ೦೧(ಶೇ೦.೯೫%), ಖಾಸಗಿ೦೮(ಶೇ೭.೬೧%), ಸ್ವಯಂ ಉದ್ಯೋಗ೦೩(ಶೇ೨.೮೫%), ದುಡಿಯುತ್ತಿಲ್ಲಾದೇ ಇರುವವರು ೮೩(ಶೇ೭೯.೦೪%) ರಷ್ಟು ಇರುವುದು ಕಂಡು ಬರುತ್ತದೆ. ಇಲ್ಲಿ ಹೆಣ್ಣು ಮಕ್ಕಳು ದಿನಗೂಲಿ ೧೦(ಶೇ೯.೫೨%) ಮತ್ತು ಖಾಸಗಿ೦೮(ಶೇ೭.೬೧%) ರಷ್ಟು ಮನೆಯ ಜವಾಬ್ದಾರಿ, ಕುಟುಂಬ ನಿರ್ವಹಣೆಗೆ ಅನಿವಾರ್ಯವಾಗಿ ದುಡಿಯುತ್ತಿದ್ದಾರೆ. ಬಹುಸಂಖ್ಯಾಂತ ಹೆಣ್ಣು ಮಕ್ಕಳು ೮೩(ಶೇ೭೯.೦೪%) ಯಾವುದೇ ವೃತ್ತಿಯಲ್ಲಿ ತೊಡಗಿಕೊಳ್ಳದೇ ಇರುವುದು ಕಂಡು ಬರುತ್ತದೆ. ಕಾರಣ ಮನೆಯ ಕೆಲಸ, ಮಕ್ಕಳ ಲಾಲನೆ ಪಾಲನೆ, ತಂದೆ ತಾಯಿಗಳು ಮತ್ತು ವಿವಾಹದ ನಂತರ ಗಂಡದಿರು ದುಡಿಯ ಹೊರಗಡೆ ಕಳಿಸದೇ ಇರುವುದರಿಂದ ಹೆಚ್ಚಿನ ಹೆಣ್ಣು ಮಕ್ಕಳು ದುಡಿಯುತ್ತಿಲ್ಲಾ.

## ಸಲಹೆಗಳು

- ✦ ಹತ್ತಿ ಉತ್ಪದನೆಯನ್ನು ಹೆಚ್ಚಿಸಿ ಜವಳಿ ಉದ್ಯಮಗಳನ್ನು ಹೆಚ್ಚು ಅಭಿವೃದ್ಧಿ ಪಡಿಸಿ ಜವಳಿ ಕಾರ್ಖಾನೆಗಳನ್ನು ರಕ್ಷಿಸಬೇಕು. ಆಮೂಲಕ ಕಾರ್ಮಿಕರಿಗೆ ಉದ್ಯೋಗ ಕಲ್ಪಸಿಕೊಟ್ಟು ಜೀವನ ನಿರ್ವಹಣೆ ಅನುಹು ಮಾಡಿಕೊಂಡುವುದು.
- ✦ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯದ ಜೊತೆಗೆ ಉದ್ಯೋಗಾವಕಾಶಗಳನ್ನು ಕಲ್ಪಸಿಕೊಡುವುದು.
- ✦ ಕಾರ್ಮಿಕರಿಗೆ ಮತ್ತು ಅವರ ಮಕ್ಕಳಿಗೆ ವಿವಿಧ ಬ್ಯಾಂಕ್‌ಗಳ ಮೂಲಕ ಸಬ್ಸಿಡಿಯಲ್ಲಿ ಸ್ವಯಂ ಉದ್ಯೋಗಕ್ಕೆ ಸರ್ಕಾರ ಅವಕಾಶ ಕಲ್ಪಿಸಿ ಕೊಡಬೇಕು.

## ಉಪಸಂಹಾರ

ಸಂಶೋಧನಾ ಅಧ್ಯಯನವು ದಾವಣಗೆರೆ ಕಾಟನ್ ಮಿಲ್ಲಿನ ಮುಚ್ಚುವಿಕೆಯಿಂದ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಸ್ಥಿತಿಯ ಮೇಲೆ ಸಂಶೋಧನೆಯನ್ನು ಕೇಂದ್ರಿಕರಿಸಲಾಗಿದೆ. ಭಾರತದ ಆರ್ಥಿಕತೆಯಲ್ಲಿ ಕಾರ್ಮಿಕರ ಪಾತ್ರ ಪ್ರಮುಖವಾದುದ್ದು. ಯಾವುದೇ ಕಾರ್ಖಾನೆಯ ಯಶಸ್ಸು ಅಲ್ಲಿನ ಕಾರ್ಮಿಕರನ್ನು ಗಣನೀಯವಾಗಿ ಅವಲಂಬಿಸಿರುತ್ತದೆ. ಮಾನವನ ಮೂಲಭೂತ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗದಿರುವ ಪರಿಸ್ಥಿತಿಯಲ್ಲಿದ್ದಾರೆ.

## ಆಧಾರ ಗ್ರಂಥಗಳು

೧. ಪಾಂಡೆ.ಕೆ. ಮಹೇಂದ್ರ, "ಕೈಗಾರಿಕಾ ಅಸ್ವಸ್ಥತೆ: ಆದ್ಯತೆಯಿಂದ ಎದುರಿಸಬೇಕಾದ ಸಮಸ್ಯೆ", ಯೋಜನಾ ಆಗಸ್ಟ್ ೧೯೯೧.
೨. ಜೋಷಿ.ಸಿ.ಟಿ., "ಕರ್ನಾಟಕದಲ್ಲಿ ಕೈಗಾರಿಕಗಳ ಸ್ಥಿತಿಗತಿ ಒಂದು ವಿಶ್ಲೇಷಣೆ" ಯೋಜನಾ ನವೆಂಬರ್ ೧೯೯೨.
೩. ಗಿರಿಜಾ.ಟಿ., "ದಾವಣಗೆರೆ ಇದು ನಮ್ಮ ಜಿಲ್ಲೆ" ನಿಹಾರಿಕಾ ಪ್ರಕಾಶನ, ಗದಗ.
೪. ಸುಬ್ರಮಣ್ಯ ಜಿ., "ಕೈಗಾರಿಕಾ ಸಮಾಜಶಾಸ್ತ್ರ", ಸ್ವಪ್ನಬುಕ್ ಹೌಸ್ ಬೆಂಗಳೂರು, ೨೦೦೨.
೫. ಚಂದ್ರಶೇಖರ್.ಟಿ.ಆರ್., "ಮಹಿಳೆ: ಆರ್ಥಿಕತೆ ಮತ್ತು ಅಭಿವೃದ್ಧಿ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೧.
೬. ಪರಮೇಶ್ವರ, ಶಂಕರ್ ಎಸ್, "ಹತ್ತಿ–ಬಿಳಿ ಬಂಗಾರ", ಕನ್ನಡ ಅಧ್ಯಯನ ವಿಭಾಗ" ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು–೧೯೮೭.
೭. ಚ.ನ.ಶಂಕರ್‌ರಾವ್: "ಸಾಮಾಜಿಕ ಸಂಶೋಧನೆಯ ಕೈಪಿಡಿ", ಜೈ ಭಾರತ್ ಪ್ರಕಾಶನ, ಮಂಗಳೂರು.
೮. ಎಂ. ನಾರಾಯಣ: "ಸಾಮಾಜಿಕ ಸಂಶೋಧನಾ ವಿಧಾನಗಳು", ಚೇತನ ಬುಕ್ ಹೌಸ್, ಮೈಸೂರು.